ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 20-03-2017

# ಪತ್ರಿಕಾ ಆಮಂತ್ರಣ

**1. 2017 ರ ಪ್ರಸಕ್ತ ಮಾವು ಹಂಗಾಮಿನಲ್ಲಿ ನಿಗಮದ ವತಿಯಿಂದ ಕೈಗೊಳ್ಳಲಿರುವ ಚಟುವಟಿಕೆಗಳ ಕುರಿತು ಪತ್ರಿಕಾಗೋಷ್ಠಿ:**

ಅಧ್ಯಕ್ಷರು,
ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ

ದಿನಾಂಕ: 21-03-2017 ಮಂಗಳವಾರ, ಸಮಯ: ಬೆಳಿಗ್ಗೆ 11.30 ಗಂಟೆಗೆ

ಸ್ಥಳ: ಹೋಟೆಲ್ ತಾಮರ, ರೇಸ್‌ಕೋರ್ಸ್ ರಸ್ತೆ, ಗಾಂಧಿ ಪ್ರತಿಮೆ ಎದುರು, ಆನಂದರಾವ್ ವೃತ್ತ, ಬೆಂಗಳೂರು.

**2. ಅಂತರಾಷ್ಟ್ರೀಯ ಅರಣ್ಯ ದಿನಾಚರಣೆ – 2017 ವಿಶೇಷ ಅಂಚೆ ಲಕೋಟೆ ಬಿಡುಗಡೆ:**

ಮುಖ್ಯ ಅತಿಥಿಗಳು

ಪಿ. ರವಿಕುಮಾರ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿ ಪರಿಸ್ಥಿತಿ ಇಲಾಖೆ

ಡಾ. ಚಾರ್ಲ್ಸ್ ಲೋಬೋ, ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್, ಕರ್ನಾಟಕ ವೃತ್ತ

ದಿನಾಂಕ: 21–03–2017 ಮಂಗಳವಾರ, ಸಮಯ: ಮಧ್ಯಾಹ್ನ 3.00 ಗಂಟೆಗೆ

ಸ್ಥಳ: ಅರಣ್ಯ ಭವನ, 8ನೇ ಮಹಡಿ ಸಭಾಂಗಣ, ಮಲ್ಲೇಶ್ವರಂ,
ಬೆಂಗಳೂರು – 560 003.

3. ಯುಗ ಪುರುಷ: ಮಹಾತ್ಮರ ಮಹಾತ್ಮ
ಮೋಹನದಾಸ್ ಗಾಂಧಿ ಅವರನ್ನು ಮಹಾತ್ಮರನ್ನಾಗಿ ಪರಿವರ್ತಿಸಿದ ಒಂದು ಆಧ್ಯಾತ್ಮಿಕ ಸಂಬಂಧದ ರೂಪಕದ ಪ್ರಧಾನ ಪ್ರದರ್ಶನ.

ದಿನಾಂಕ; 21–03–2017 ಮಂಗಳವಾರ, ಸಮಯ: ಸಂಜೆ 7–00 ಗಂಟೆಗೆ

ಸ್ಥಳ: ಬ್ಯಾಂಕ್ವೆಟ್ ಸಭಾಂಗಣ, ವಿಧಾನಸೌಧ, ಬೆಂಗಳೂರು.

## ವಿಧಾನ ಪರಿಷತ್ತಿನಲ್ಲಿಂದು

## ದಡಾರ – ರುಬೆಲ್ಲಾ ಖಾಯಿಲೆ ಇಳಿಮುಖ

ಬೆಂಗಳೂರು, ಮಾರ್ಚ್ 20 , (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ದಡಾರ ಮತ್ತು ರುಬೆಲ್ಲಾ ಖಾಯಿಲೆಗೆ ಒಟ್ಟು 416 ಎಂ–ಆರ್ ಪ್ರಕರಣ, 360 ರಕ್ತ ಮಾದರಿ ಸಂಗ್ರಹ, 139 ದಡಾರ ಪಾಸಿಟಿವ್, 42 ರುಬೆಲ್ಲಾ ಪಾಸಿಟಿವ್ ಬೆಳಕಿಗೆ ಬಂದಿದ್ದು, ಅದರಲ್ಲಿ ದಡಾರ ಪಾಸಿಟಿವ್ ಬಳ್ಳಾರಿ ಜಿಲ್ಲೆಯಲ್ಲಿ 36 ಪ್ರಕರಣ ಹಾಗೂ ಬೆಂಗಳೂರು ನಗರದಲ್ಲಿ 22 ಪ್ರಕರಣಗಳು ದಾಖಲಾಗಿವೆ ಎಂದು ವಿಧಾನ ಪರಿಷತ್ತಿನಲ್ಲಿಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಕೆ.ಆರ್. ರಮೇಶ್ ಅವರು ತಿಳಿಸಿದರು.

ಶಾಸಕ ಆರ್ ಪ್ರಸನ್ನ ಕುಮಾರ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಸಚಿವರು ದಡಾರ ಮತ್ತು ರುಬೆಲ್ಲಾ ಖಾಯಿಲೆ ಪ್ರಕರಣಗಳ ಮಾಹಿತಿಯನ್ನು ಸದನಕ್ಕೆ ತಿಳಿಸಿ, ವಿಶ್ವದಲ್ಲಿ 2015 ರಲ್ಲಿ 1,34,200 ದಡಾರ ಪ್ರಕರಣದಲ್ಲಿ ಸಾವು ಸಂಭವಿಸಿದ್ದು, ಅದರಲ್ಲಿ 49,200 ಸಾವುಗಳು ಭಾರತದಲ್ಲಿ ಸಂಭವಿಸಿವೆ.

ದಡಾರ ಮತ್ತು ರುಬೆಲ್ಲಾ ಖಾಯಿಲೆಗೆ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಬಲಿಯಾಗಿರುವ ಮಕ್ಕಳ ಸಂಖ್ಯೆ 16 ಎಂದು ಹೇಳಿದ ಸಚಿವರು ವರ್ಷದಿಂದ ವರ್ಷಕ್ಕೆ ಪ್ರಕರಣಗಳು ಇಳಿಮುಖವಾಗುತ್ತಿವೆ.

ರಾಜ್ಯದಲ್ಲಿ ಇಲ್ಲಿಯವರೆಗೆ 35 ಲಕ್ಷಕ್ಕೂ ಹೆಚ್ಚಿನ ಮಕ್ಕಳಿಗೆ 2016-17 ನೇ ಸಾಲಿನಲ್ಲಿ ದಡಾರ ಲಸಿಕೆಯನ್ನು ಹಾಕಿಸಲಾಗಿದೆ. ಲಸಿಕೆ ಹಾಕಿಸದೇ ಇರುವ ಮಕ್ಕಳಿಗೆ ಪ್ರತಿ ಗುರುವಾರ ನಿರಂತರವಾಗಿ ಲಸಿಕಾ ದಿನವನ್ನು ಏರ್ಪಡಿಸಲಾಗುತ್ತಿದೆ ಎಂದು ಹೇಳಿದರು.

ಎಸ್‌ಎಂ:ಜೆಡಿ:ಜಿಪಿಆರ್.

## ಗಿರಿಜನ ಕುಟುಂಬಗಳ ಪೌಷ್ಠಿಕ ಆಹಾರ

ಬೆಂಗಳೂರು, ಮಾರ್ಚ್ 20 , (ಕರ್ನಾಟಕ ವಾರ್ತೆ)

ಕರ್ನಾಟಕದ ಏಳು ಜಿಲ್ಲೆಗಳ ವ್ಯಾಪ್ತಿಗಳಲ್ಲಿ ವಾಸಿಸುತ್ತಿರುವ ಗಿರಿಜನ ಕುಟುಂಬಗಳಿಗೆ ಈಗಾಗಲೇ ನೀಡುತ್ತಿರುವ ಮಳೆಗಾಲದಲ್ಲಿ ಪೌಷ್ಠಿಕ ಆಹಾರ ಕಾರ್ಯಕ್ರಮ ಯೋಜನೆಯಡಿಯಲ್ಲಿ ಕೈ ತಪ್ಪಿರುವ ಇತರೆ ಗಿರಿಜನರನ್ನು ಸಹ ಸೇರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನೇಯ ಅವರು ತಿಳಿಸಿದರು.

ಸದನದಲ್ಲಿ ಕೆಲವು ಗಿರಿಜನರನ್ನು ಈ ಯೋಜನೆಯಿಂದ ಕೈಬಿಡಲಾಗಿದೆ ಎಂದು ಸದಸ್ಯೆ ಶ್ರೀಮತಿ ಮೋಟಮ್ಮ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿ ಮಾತನಾಡಿದ ಸಚಿವ ಕೈ ತಪ್ಪಿರುವ ಗಿರಿಜನರ ಪಟ್ಟಿಯನ್ನು ಮರು ಪರಿಶೀಲಿಸಲು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಕ್ರಮ ಕೈಗೊಳ್ಳಲಾಗುವುದು.

ಈ ಯೋಜನೆಯಡಿಯಲ್ಲಿ ನೀಡುತ್ತಿರುವ ಪೌಷ್ಠಿಕ ಆಹಾರದ ಬಗ್ಗೆ ಫಲಾನುಭವಿಗಳೊಂದಿಗೆ ಸಮಾಲೋಚಿಸಿ ಅವರಿಗೆ ಸಿಗುತ್ತಿರುವ ಆಹಾರ ಪದಾರ್ಥಗಳಲ್ಲಿ ಬದಲಾವಣೆಗಳು ಬೇಕಾದಲ್ಲಿ ಸರ್ಕಾರ ಸ್ಪಂದಿಸಲು ಸಿದ್ಧವಿದೆ. ಈ ಯೋಜನೆಗಾಗಿ ಪ್ರಸಕ್ತ ಸಾಲಿನಿಂದ 7.75 ಕೋಟಿ ರೂ. ಗಳನ್ನು ನಿಗದಿಮಾಡಿ 3.50 ಕೋಟಿಗಳನ್ನು ಬಿಡುಗಡೆಮಾಡಲಾಗಿದ್ದು, ಇದುವರೆಗೆ 1.15 ಕೋಟಿ ರೂ. ಅನುದಾನವನ್ನು ವೆಚ್ಚಮಾಡಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯ 4,673 ಗಿರಿಜನ ಕುಟುಂಬಗಳಿಗೆ ಪೌಷ್ಠಿಕ ಆಹಾರ ವಿತರಣೆ ಮಾಡಲಾಗಿದೆ. ಮಳೆಗಾಲದಲ್ಲಿ ಗಿರಿಜನರ ಜೀವನೋಪಾಯಕ್ಕೆ ಕಷ್ಟವಿರುವುದರಿಂದ 6 ತಿಂಗಳ ಅವಧಿಗೆ ಜೂನ್‌ನಿಂದ ಡಿಸೆಂಬರ್‌ವರೆಗೆ ಸಾರ್ವಜನಿಕ ಪಡಿತರ ವಿತರಣೆ ಜೊತೆಯಲ್ಲಿ ಹೆಚ್ಚುವರಿಯಾಗಿ ಪೌಷ್ಠಿಕ ಆಹಾರವನ್ನು ಸಹ ನೀಡಲಾಗುತ್ತಿದೆ ಎಂದು ಹೇಳಿದರು.

ಜೆಡಿ:ಜಿಪಿಆರ್.

# ಗೋಬಿ ಮಂಚೂರಿ ಮತ್ತು ಫ್ರೈಡ್ ರೈಸ್

ಬೆಂಗಳೂರು, ಮಾರ್ಚ್ 20 , (ಕರ್ನಾಟಕ ವಾರ್ತೆ)

ಬೀದಿಗಳಲ್ಲಿ ತಯಾರಿಸುವ ಗೋಬಿ ಮಂಚೂರಿ ಮತ್ತು ಫ್ರೈಡ್ ರೈಸ್ ಹೆಚ್ಚಿನ ರುಚಿಗಾಗಿ ಟೇಸ್ಟಿಂಗ್ ಪೌಡರನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿರುವುದು ವೈಜ್ಞಾನಿಕವಾಗಿ ಹಲವು ರೋಗಗಳಿಗೆ ಕಾರಣವಾಗಿರುವುದು ವಿವಿಧ ಅಧ್ಯಯನಗಳಿಂದ ಬೆಳಕಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಕೆ.ಆರ್. ರಮೇಶ್‌ಕುಮಾರ್ ತಿಳಿಸಿದರು.

ಇಂದು ವಿಧಾನ ಪರಿಷತ್ತಿನ ಕಲಾಪದಲ್ಲಿ ಬಿ.ಜೆ.ಪಿ.ಯ ಹಿರಿಯ ಸದಸ್ಯ ರಾಮಚಂದ್ರ ಗೌಡ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿ ಮಾತನಾಡಿದ ಸಚಿವರು ಚೈನೀಸ್ ರೆಸ್ಟೋರೆಂಟ್‌ಗಳಲ್ಲಿ ಹಾಗೂ ಬೀದಿ ಬದಿಯ ಚೈನೀಸ್ ಆಹಾರ ಪದಾರ್ಥಗಳಲ್ಲಿ ಟೇಸ್ಟಿಂಗ್ ಪೌಡರ್‌ಆಗಿ ಬಳಸುವ ಮೋನೋಸೋಡಿಯಂ ಗ್ಲೋಟಾಮೇಟಾ ರಾಸಾಯನಿಕವನ್ನು ಆಹಾರ ಪದಾರ್ಥಗಳಲ್ಲಿ ಬಳಸಲಾಗುತ್ತಿದ್ದು ಸದರಿ ರಾಸಾಯನಿಕವನ್ನು ನಿಗದಿತ ಪ್ರಮಾಣದಲ್ಲಿ ಉತ್ತಮ ಉತ್ಪಾದನಾ ವಿಧಾನದಲ್ಲಿ ಬಳಸಲು ಅನುಮತಿಸಲಾಗಿದ್ದು, ಅದರಂತೆ ಮಾರುಕಟ್ಟೆಯಲ್ಲಿ ಬಿಡುಗಡೆ ಮಾಡಲಾಗಿದೆ. ಆದರೆ ಹೆಚ್ಚಿನ ಜನರನ್ನು ಆಕರ್ಷಿಸಲು ವ್ಯಾಪಾರಸ್ಥರು ಈ ರಾಸಾಯನಿಕವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿದ್ದಾರೆ.

ಇದರಿಂದ ತಲೆನೋವು, ಹೊಟ್ಟೆ ತೊಳಸುವುದು, ಎದೆನೋವು, ತಲೆಸುತ್ತು, ನಿಶಕ್ತಿಯಂತಹ ಆರೋಗ್ಯ ಸಮಸ್ಯೆಗಳು ಉಂಟಾಗುವ ಸಾಧ್ಯತೆಗಳಿದ್ದು, ಹೆಚ್ಚಿನ ಪ್ರಮಾಣದಲ್ಲಿ

ರಾಸಾಯನಿಕಗಳನ್ನು ಬಳಸುವುದು ಅಪರಾಧವಾಗಿದೆ ಈ ಬಗ್ಗೆ ಸರಕಾರ ಸೂಕ್ತಕ್ರಮವಹಿಸಲಿದೆ ಎಂದು ಹೇಳಿದರು.

ಎಸ್‌ಎಂ:ಜೆಡಿ:ಜಿಪಿಆರ್.

## ಕೇಬಲ್ ನಿಯಂತ್ರಣಕ್ಕೆ ಕಾನೂನು

ಬೆಂಗಳೂರು, ಮಾರ್ಚ್ 20 , (ಕರ್ನಾಟಕ ವಾರ್ತೆ)

ಕೇಬಲ್ ಮತ್ತು ಟಿ.ವಿ. ಚಾನೆಲ್‌ಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳ ದೂರುಗಳು ಕೇಂದ್ರ ಸರ್ಕಾರದ ಅಧೀನ ಸಂಸ್ಥೆ ಟ್ರಾಯ್ ಅಡಿಯಲ್ಲಿ ಬರುತ್ತವೆ, ರಾಜ್ಯದಲ್ಲಿ ಈ ಕುರಿತು ಸಮಗ್ರ ಪರಿಶೀಲನೆ ನಡೆಸಿ ನೂತನ ಕೇಬಲ್ ಕಾನೂನು ಶೀಘ್ರದಲ್ಲಿ ಜಾರಿ ತರಲಾಗುವುದು ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ತಿಳಿಸಿದರು.

ಇಂದು ವಿಧಾನ ಪರಿಷತ್ತಿನಲ್ಲಿ ಸದಸ್ಯ ಪುಟ್ಟಣ್ಣ ಅವರ ಲಿಖಿತ ಪ್ರಶ್ನೆಗೆ ಉತ್ತರಿಸಿದ ಗೃಹ ಸಚಿವರು ಟ್ರಾಯ್ ಸಂಸ್ಥೆ ಅನ್ವಯ ಕರ್ನಾಟಕದಲ್ಲಿ ಈಗಾಗಲೇ ಟಿ.ವಿ. ಚಾನೆಲ್‌ಗಳ ಕಾರ್ಯಕ್ರಮಗಳ ಮೇಲಿನ ದೂರುಗಳನ್ನು ಪರಿಶೀಲಿಸಲು ರಾಜ್ಯ ಮಟ್ಟದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಸಮಿತಿ ಹಾಗೂ ಜಿಲ್ಲಾ ಮಟ್ಟದಲ್ಲಿ ಆಯಾ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಸಮಿತಿಗಳನ್ನು ರಚಿಸಲಾಗಿದ್ದು ಅವುಗಳು ಮುಖ್ಯವಾಗಿ ಪ್ರಸಾರವಾಗುವ ಕಾರ್ಯಕ್ರಮಗಳ ಮೇಲಿನ ದೂರುಗಳನ್ನು ಪರಿಶೀಲಿಸುತ್ತವೆ.

ಕೇಬಲ್ ಶುಲ್ಕವನ್ನು ಕೇಂದ್ರ ಸರ್ಕಾರದ ಅಧೀನ ಟ್ರಾಯ್ ಸಂಸ್ಥೆ ನಿಗದಿಪಡಿಸುವ ಅಧಿಕಾರ ಹೊಂದಿದ್ದು ಈ ತಿಂಗಳ 3 ರಂದು ನಡೆದ ಟ್ರಾಯ್ ಸಭೆಯಲ್ಲಿ ಕನಿಷ್ಠ 100 ಚಾನೆಲ್‌ಗಳ ತಿಂಗಳ ಶುಲ್ಕ 130 ರೂ. ಜೊತೆಗೆ ತೆರಿಗೆ ಸೇರಿ ಮಾಸಿಕ ಶುಲ್ಕ ಎಂದು ತಿಳಿಸಿದೆ ಇದು ಈ ಏಪ್ರಿಲ್‌ನಿಂದ ಜಾರಿಗೆ ಬರಲಿದೆ.

**ಕೇಬಲ್ ವ್ಯವಹಾರದಿಂದ ರಾಜ್ಯ ಸರ್ಕಾರಕ್ಕೆ ಯಾವುದೇ ತೆರಿಗೆ ಸಂದಾಯವಾಗುವುದಿಲ್ಲ ಹಾಗೂ ರಾಜ್ಯ ಸರ್ಕಾರದ ವಿದ್ಯುತ್ ಕಂಬಗಳು ಸೇರಿದಂತೆ ಇನ್ನಿತರ ಸವಲತ್ತುಗಳನ್ನು ಬಳಸಿಕೊಳ್ಳುವ ಕೇಬಲ್ ವ್ಯವಹಾರ ಕುರಿತು ಅಧ್ಯಯನ ನಡೆಸಿ ಶೀಘ್ರದಲ್ಲಿ ನೂತನ ಕೇಬಲ್ ಕಾನೂನು ಜಾರಿಗೊಳಿಸಲು ಚಿಂತಿಸಲಾಗುವುದು ಎಂದು ಸಚಿವರು ಹೇಳಿದರು.**

**ಎಸ್‌ಎಂ:ಜೆಡಿ:ಜಿಪಿಆರ್.**

## ನಾಲ್ಕು ವರ್ಷದಲ್ಲಿ 50 ಸಾವಿರ ಕೋಟಿ ರೂ. ವೆಚ್ಚ ಮಾಡಲಾಗಿದೆ – ಸಚಿವ ಹೆಚ್. ಆಂಜನೇಯ

ಬೆಂಗಳೂರು, ಮಾರ್ಚ್ 20 (ಕರ್ನಾಟಕ ವಾರ್ತೆ)

ನಮ್ಮ ಸರ್ಕಾರವು ನಾಲ್ಕು ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆವತಿಯಿಂದ ವಿವಿಧ ಯೋಜನೆಗಳಿಗೆ 50 ಸಾವಿರ ಕೋಟಿ ರೂ. ಗಳನ್ನು ಖರ್ಚು ಮಾಡಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್. ಆಂಜನೇಯ ಅವರು ವಿಧಾನ ಪರಿಷತ್‌ನಲ್ಲಿಂದು ತಿಳಿಸಿದರು.

ಮಧ್ಯಾಹ್ನ ಪರಿಷತ್‌ನಲ್ಲಿ ಬಜೆಟ್ ಮೇಲಿನ ಚರ್ಚೆಯ ಸಮಯದಲ್ಲಿ ವಿರೋಧ ಪಕ್ಷದ ನಾಯಕ ಕೆ.ಎಸ್. ಈಶ್ವರಪ್ಪ ಅವರು ಸಮಾಜ ಕಲ್ಯಾಣ ಇಲಾಖೆಯ ಅನುದಾನ ಪರಿಶೀಲನೆಗೆ ಸದನ ಸಮಿತಿ ರಚಿಸಬೇಕೆಂದು ಬೇಡಿಕೆ ಸಲ್ಲಿಸಿದ ಹಿನ್ನೆಲೆಯಲ್ಲಿ ಸಚಿವರು ನಮ್ಮ ಸರ್ಕಾರ ಪ್ರಪ್ರಥಮ ಬಾರಿಗೆ ದೇಶದಲ್ಲಿಯೇ ಮೊದಲ ಬಾರಿಗೆ ಯೋಜನೆಯ ಅನುದಾನ ಸೋರಿಕೆ ಆಗುವುದನ್ನು ತಡೆಯುವ ಸಲುವಾಗಿ ಕಠಿಣವಾದ ಕಾಯಿದೆಯನ್ನು ಜಾರಿಗೆ ತಂದಿದೆ ಎಂದರು.

ಹಿಂದಿನ ಸರಕಾರದ ಅವಧಿಯಲ್ಲಿ ಎಸ್.ಸಿ.ಎಸ್.ಟಿ. ವಿದ್ಯಾರ್ಥಿಗಳ ಅಭಿವೃದ್ಧಿಗೆ ಹಮ್ಮಿಕೊಳ್ಳಲಾಗಿದ್ದ ಯೋಜನೆಗಳಿಗೆ ಕೇವಲ 27 ಸಾವಿರ ಕೋಟಿ ರೂ. ಅನುದಾನವನ್ನು ಮಾತ್ರ ಖರ್ಚು ಮಾಡಿದ್ದರೆ ನಮ್ಮ ಸರ್ಕಾರ 4 ವರ್ಷಗಳಲ್ಲಿ 50 ಸಾವಿರ ಕೋಟಿ ರೂ. ಅನ್ನು ಖರ್ಚು ಮಾಡಿದ್ದು ವಿದ್ಯಾರ್ಥಿಗಳಿಗೆ ಇಲಾಖೆವತಿಯಿಂದ ನೀಡಲಾಗಿರುವ ಸವಲತ್ತುಗಳು ಯಾವುದೂ ಕಳಪೆ ಮಟ್ಟದಾಗಿರುವುದಿಲ್ಲ ಎಂದು ಅವರು ಸರ್ಕಾರವನ್ನು ಸಮರ್ಥಿಸಿಕೊಂಡರು.

ಎಸ್‌ಎಂ:ಬಿಜಿಪಿ:ಜಿಪಿಆರ್.

## ಸಂಗೊಳ್ಳಿರಾಯಣ್ಣ ಸ್ಮಾರಕ ಅಭಿವೃದ್ಧಿ ಪ್ರಗತಿಯಲ್ಲಿದೆ

ಬೆಂಗಳೂರು, ಮಾರ್ಚ್ 20 (ಕರ್ನಾಟಕ ವಾರ್ತೆ)

ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿರಾಯಣ್ಣ ಅವರು ಹುತಾತ್ಮರಾದ ಸ್ಥಳವನ್ನು ಅಭಿವೃದ್ಧಿ ಮಾಡಲು ಈಗಾಗಲೇ ರೂಪುರೇಷೆಯನ್ನು ತಯಾರುಮಾಡಲಾಗಿದ್ದು, ಅಭಿವೃದ್ಧಿ ಕೆಲಸವು ಪ್ರಗತಿಯಲ್ಲಿದೆ ಎಂದು ಹೆಚ್.ಎಂ. ರೇವಣ್ಣ ಅವರು ವಿಧಾನ ಪರಿಷತ್ತ್‌ನಲ್ಲಿಂದು ತಿಳಿಸಿದರು.

ಇಂದು ಮಧ್ಯಾಹ್ನ ವಿರೋಧ ಪಕ್ಷದ ನಾಯಕ ಕೆ.ಎಸ್. ಈಶ್ವರಪ್ಪ ಅವರು ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡುತ್ತಾ ಸಂಗೊಳ್ಳಿರಾಯಣ್ಣ ಹುತಾತ್ಮರಾದ ಸ್ಥಳ ಹದಗೆಟ್ಟಸ್ಥಿತಿಯಲ್ಲಿ ಇದೆ. ಸ್ಮಾರಕ ಅಭಿವೃದ್ಧಿಗೆ ಬಜೆಟ್‌ನಲ್ಲಿ ಹಣವನ್ನು ಒದಗಿಸಿಲ್ಲವೆಂದು ಆರೋಪಿಸಿದ ಹಿನ್ನೆಲೆಯಲ್ಲಿ ಸ್ಮಾರಕ ಅಭಿವೃದ್ಧಿಗೆ ರೂಪುರೇಷೆ ತಯಾರು ಮಾಡುವ ಸಮಿತಿಗೆ ಅಧ್ಯಕ್ಷರಾಗಿರುವ ಹೆಚ್.ಎಂ. ರೇವಣ್ಣ ಅವರು ಸರ್ಕಾರದ ಪರವಾಗಿ ಉತ್ತರಿಸಿದರು.

ರಾಯಣ್ಣ ಹುತಾತ್ಮ ಸ್ಥಳದಲ್ಲಿ ಇರುವ ಕೆರೆಯನ್ನು ನವೀಕರಿಸಿ ದೋಣಿ ವಿಹಾರಕ್ಕೆ ಅನುವು ಮಾಡಿ ಕೊಡಲಾಗುತ್ತಿದ್ದು, ಈಗಾಗಲೇ ಸರ್ಕಾರದಿಂದ 4 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅಲ್ಲಿ ಯಾತ್ರಿ ನಿವಾಸವನ್ನು ಮಾಡಲು ಉದ್ದೇಶಿಸಲಾಗಿದೆ. ಸಂಶೋಧಕರು ಮತ್ತು ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯವನ್ನು ಒದಗಿಸಿಕೊಡಲು ಅನುಕೂಲವಾಗುವಂತೆ ಆಡಿಟೋರಿಯಂ ಕೂಡ ಸಿದ್ಧಪಡಿಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು.

ಎಸ್‌ಎಂ:ಬಿಜಿಪಿ:ಜಿಪಿಆರ್.

# ವಿಧಾನ ಸಭೆಯಲ್ಲಿ ಇಂದು

## ತಿದ್ದುಪಡಿ ವಿಧೇಯಕ ಮಂಡನೆ

**ಬೆಂಗಳೂರು, ಮಾರ್ಚ್ 20 , (ಕರ್ನಾಟಕ ವಾರ್ತೆ)**

**ಇಂದು ವಿಧಾನಸಭೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯ (ತಿದ್ದುಪಡಿ) ವಿಧೇಯಕ – 2017ನ್ನು ಮಂಡಿಸಲಾಯಿತು. ಉನ್ನತ ಶಿಕ್ಷಣ ಸಚಿವ ಶ್ರೀ ಬಸವರಾಜ ರಾಯರೆಡ್ಡಿ ಅವರು ತಿದ್ದುಪಡಿ ವಿಧೇಯಕವನ್ನು ಮಂಡಿಸಿದರು.**

**ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ದಲ್ಲಿ ಇರುವಂತೆ ಕುಲಪತಿಗಳ ಹುದ್ದೆಯನ್ನು ಹೊಂದಲು ಗರಿಷ್ಠ ವಯೋಮಿತಿಯನ್ನು 67 ವರ್ಷಗಳಿಗೆ ಹೆಚ್ಚಿಸುವುದು ಮತ್ತು ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳನ್ನು ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕರು ಲೆಕ್ಕ ಪರಿಶೋಧನೆ ಮಾಡಬೇಕು ಎಂಬುದರ ಬದಲಿಗೆ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಪ್ರಧಾನ ನಿರ್ದೇಶಕರು ಎಂದು ತಿದ್ದುಪಡಿ ಮಾಡಲು ಈ ವಿಧೇಯಕ ಮಂಡಿಸಲಾಗಿದೆ.**

**ಕೆಎನ್‌ಕೆ:ಜಿಪಿಆರ್.**

# ಕೆರೆ ಒತ್ತುವರಿ ತೆರವಿಗೆ ಕ್ರಮ: ಸಚಿವರ ಭರವಸೆ

**ಬೆಂಗಳೂರು, ಮಾರ್ಚ್ 20 , (ಕರ್ನಾಟಕ ವಾರ್ತೆ)**

ಹಿರೇಕೆರೆಯೂರು ಶಾಸಕ ಯು.ಬಿ. ಬಣಕಾರ ಇವರು ಮುದ್ದಿನಕೊಪ್ಪದ ಗ್ರಾಮದ ಕೆರೆಯನ್ನು ಅಕ್ರಮವಾಗಿ ಸಾಗುವಳಿ ಮಾಡಲಾಗಿದೆ. ಜಿಲ್ಲಾಧಿಕಾರಿಗಳು ಸೂಚನೆ ನೀಡಿದರೂ ಸಹ ತೆರವುಗೊಳಿಸಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಕಂದಾಯ ಸಚಿವರು ಈ ಕುರಿತು ಜಿಲ್ಲಾಧಿಕಾರಿಗಳಿಗೆ ಸೂಕ್ತ ವರದಿ ಸಲ್ಲಿಸುವಂತೆ ಮನವಿ ಸಲ್ಲಿಸಲಾಗಿದೆ, ಸದರಿ ಒತ್ತುವರಿಯನ್ನು ಶೀಘ್ರದಲ್ಲಿ ತೆರವುಗೊಳಿಸಲಾಗುವುದು ಎಂದರು.

ಕೆಎನ್‌ಕೆ:ಜಿಪಿಆರ್.

# ಯುಗ ಪುರುಷ – ಮಹಾತ್ಮರ ಮಹಾತ್ಮ

**ಬೆಂಗಳೂರು, ಮಾರ್ಚ್ 20 , (ಕರ್ನಾಟಕ ವಾರ್ತೆ)**

ಗ್ರಾಮೀಣಾ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಮಾರ್ಚ್ 21 ರಂದು ಸಂಜೆ 7–00 ಗಂಟೆಗೆ ವಿಧಾನಸೌಧ ಬ್ಯಾಂಕ್ವೆಟ್ ಹಾಲ್‌ನಲ್ಲಿ "ಯುಗ ಪುರುಷ – ಮಹಾತ್ಮರ ಮಹಾತ್ಮ" ರೂಪಕದ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ.

ಮಹಾತ್ಮ ಗಾಂಧೀಜಿಯವರ 150 ನೇ ಜನ್ಮ ದಿನವಾದ 2018 ರ ಅಕ್ಟೋಬರ್ 2 ರೊಳಗಾಗಿ ಕರ್ನಾಟಕ ರಾಜ್ಯ ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿಸುವ ಗುರಿಯನ್ನು ಹೊಂದಿರುವ ಇಲಾಖೆ "ಸಂಪೂರ್ಣ ನೈರ್ಮಲ್ಯ ವ್ಯವಸ್ಥೆಯನ್ನು ಒದಗಿಸುವ ಮೂಲಕ ನಿರ್ಮಿಸುವ ಗ್ರಾಮವೇ ಮಾದರಿ ಗ್ರಾಮ, ಪ್ರತಿಯೊಬ್ಬ ಗ್ರಾಮೀಣ ಕಾರ್ಯಕರ್ತನ್ನು ಪರಿಹರಿಸುವ ಮೊದಲ ಸಮಸ್ಯೆಯೆಂದರೆ ಆ ಗ್ರಾಮದ ನೈರ್ಮಲ್ಯ ಸಮಸ್ಯೆ" ಎಂಬ ಧ್ಯೇಯದೊಂದಿಗೆ ಅಹಿಂಸೆ, ಸತ್ಯ, ಸ್ವಚ್ಛತೆ ಮತ್ತು ಮಹಾತ್ಮರ ಶಬ್ದಗಳಲ್ಲಿ ಸುರಕ್ಷತೆಯ ಸಂದೇಶವನ್ನು ಸಾರುವ ಯುಗ ಪುರುಷ ರೂಪಕ ಪ್ರದರ್ಶನ ವಿಶೇಷವಾದದ್ದು.

"ಕೋಡ್ ಮಂತ್ರ" ಖ್ಯಾತಿಯ ರಾಜೇಶ್ ಜೋಶಿ 'ಯುಗ ಪುರುಷ' ರೂಪಕವನ್ನು ನಿರ್ದೇಶಿಸಿದ್ದಾರೆ. ಮರಾಠಿ ಬರಹಗಾರ ಉತ್ತಮ್ ಗಡಾ ಅವರು ಬರೆದ ಕಥೆಯನ್ನಾಧರಿಸಿದ ಈ ರೂಪಕಕ್ಕೆ ಸಚಿನ-ಜಿಗರ್‌ದ್ವಯರು ಸಂಗೀತ ನೀಡಿದ್ದಾರೆ.

"ಯುಗಪುರುಷ – ಮಹಾತ್ಮರ ಮಹಾತ್ಮ" – ಶ್ರೀಮದ್ ರಾಜ್‌ಚಂದ್ರಜೀ ಮತ್ತು ಮಹಾತ್ಮ ಗಾಂಧೀಯವರ ನಡುವಿನ ಆಧ್ಯಾತ್ಮಿಕ ಸಂಬಂಧವನ್ನು ಚಿತ್ರಿಸುವ ಒಂದು ಸ್ಫೂರ್ತಿದಾಯಕ ರೂಪಕ.

2016 ರ ನವೆಂಬರ್ 14 ರಂದು ಗುಜರಾತಿನಲ್ಲಿ ಪ್ರಥಾನ ಪ್ರದರ್ಶನ ಕಂಡ 'ಯುಗ ಪುರುಷ' 125 ದಿನಗಳ ಅವಧಿಯಲ್ಲಿ 250 ಪ್ರದರ್ಶನಗಳನ್ನು ಕಂಡಿದೆ. ರಾಷ್ಟ್ರಾದ್ಯಂತ ಈ ಪ್ರದರ್ಶನವನ್ನು ಈಗಾಗಲೇ 1,80,000 ಜನ ವೀಕ್ಷಿಸಿದ್ದಾರೆ.

ಜನಪ್ರಿಯ ಬೇಡಿಕೆಯ ಮೇರೆಗೆ ರಾಷ್ಟ್ರದ ವಿವಿಧ ನಗರಗಳಲ್ಲಿ ನಾಲು ವಿವಿಧ ತಂಡಗಳು ಈ ರೂಪಕವನ್ನು ಏಕಕಾಲಕ್ಕೆ ಪ್ರದರ್ಶಿಸುತ್ತಿವೆ. 'ಯುಗಪುರುಷ' ಪ್ರಸ್ತುತವಾಗಿ ಹಿಂದಿ, ಗುಜರಾತಿ, ಕನ್ನಡ ಭಾಷೆಗಳಲ್ಲಿ ಪ್ರದರ್ಶನಗೊಳ್ಳುತ್ತಿದ್ದು, ಕೆಲವೇ ದಿನಗಳಲ್ಲಿ ಇಂಗ್ಲೀಷ್, ಮರಾಠಿ, ಬಂಗಾಳಿ ಮತ್ತು ತಮಿಳು ಭಾಷೆಗೆ ರೂಪಾಂತರಗೊಳ್ಳಲಿದೆ.

ಮುಂಬರುವ ವರ್ಷಗಳಲ್ಲಿ 'ಯುಗ ಪುರುಷ' ರೂಪಕವು ಭಾರತದ ಎಲ್ಲ ಭಾಗಗಳಲ್ಲಿ ಅಲ್ಲದೇ ಅಮೆರಿಕ, ಕೆನಡಾ, ಬ್ರಿಟನ್, ಸಿಂಗಾಪೂರ್, ಹಾಂಕಾಂಗ್, ಮಲೇಶಿಯಾ, ಆಸ್ಟ್ರೇಲಿಯಾ, ಯುಎಇ, ಒಮನ್, ಕೀನ್ಯಾ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಪ್ರದರ್ಶನಗೊಳ್ಳಲಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಏಪ್ರಿಲ್ 4 ರಂದು ಕಬ್ಬನ್ ಪಾರ್ಕ್‌ನ ಬಾಲಭವನದಲ್ಲಿ "ವಿಶ್ವ ಆಟಿಸಂ ಅರಿವು" ದಿನಾಚರಣೆ

**ಬೆಂಗಳೂರು, ಮಾರ್ಚ್ 20 , (ಕರ್ನಾಟಕ ವಾರ್ತೆ)**

ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿರುವ ಬಾಲಭವನದಲ್ಲಿ ಏಪ್ರಿಲ್ 4 ರಂದು "ವಿಶ್ವ ಆಟಿಸಂ ಅರಿವು" ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ.

ಆಟಿಸಂ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳು ಹಾಗೂ ಸರ್ಕಾರದ ಸಹಾಯದೊಂದಿಗೆ "ವಿಶ್ವ ಆಟಿಸಂ ಅರಿವು" ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು ಈ ಸಂಬಂಧ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದೇ ಮುಖ್ಯ ಉದ್ದೇಶವಾಗಿದೆ.

ಏಪ್ರಿಲ್ 4 ರಂದು ಬೆಳಿಗ್ಗೆ 6 ರಿಂದ 8 ಗಂಟೆವರೆಗೆ ಬೆಂಗಳೂರಿನ ಎಂ.ಜಿ. ರಸ್ತೆಯಲ್ಲಿ ಅರಿವು ಮೂಡಿಸುವ 10K ಮತ್ತು 5K ಮ್ಯಾರಥಾನ್, ನಡಿಗೆ ಜಾಥಾ ಏರ್ಪಡಿಸಲಾಗಿದೆ. ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 12.30 ಗಂಟೆವರೆಗೆ ವೇದಿಕೆ ಕಾರ್ಯಕ್ರಮ ಹಾಗೂ ಅಪರಾಹ್ನ 1.00 ಗಂಟೆಯಿಂದ 6.00 ಗಂಟೆವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜಿಪಿಆರ್.

## ಮಾರ್ಚ್ 21 ರಂದು

## ಅಂತರರಾಷ್ಟ್ರೀಯ ಅರಣ್ಯ ದಿನಾಚರಣೆ

**ಬೆಂಗಳೂರು, ಮಾರ್ಚ್ 20 , (ಕರ್ನಾಟಕ ವಾರ್ತೆ)**

ಅರಣ್ಯ ಇಲಾಖೆ ವತಿಯಿಂದ ಮಾರ್ಚ್ 21 ರಂದು "ಅಂತರರಾಷ್ಟ್ರೀಯ ಅರಣ್ಯ ದಿನಾಚರಣೆ"ಯನ್ನು ನಗರದ ಮಲ್ಲೇಶ್ವರಂ 18 ನೇ ಕ್ರಾಸ್‌ನಲ್ಲಿರುವ ಅರಣ್ಯ ಭವನದಲ್ಲಿ ಹಮ್ಮಿಕೊಂಡಿದೆ.

ಅಂದು ಬೆಳಿಗ್ಗೆ 11.30 ರಿಂದ ಸಂಜೆ 5.30 ರವರೆಗೆ ಅರಣ್ಯ, ಪರಿಸರ ಮತ್ತು ವನ್ಯಜೀವಿ ಬಗೆಗಿನ ಪುಸ್ತಕ ಪ್ರದರ್ಶನ ಏರ್ಪಡಿಸಲಾಗಿದ್ದು, ಅಂದು ಮಧ್ಯಾಹ್ನ 3.00 ಗಂಟೆಗೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು ಅಂಚೆ ಇಲಾಖೆಯವರು ಹೊರತಂದಿರುವ ವಿಶೇಷ " ಫಸ್ಟ್ ಡೇ ಕವರ್" ಪುಸ್ತಕದ ಬಿಡುಗಡೆ ಸಮಾರಂಭವನ್ನು ಸಹ ಹಮ್ಮಿಕೊಳ್ಳಲಾಗಿದೆ.

ಪರಿಸರ ಪ್ರೇಮಿ ಹಾಗೂ ಲೇಖಕ ನಾಗೇಶ್ ಹೆಗಡೆ ಅವರಿಂದ ವಿಶೇಷ ಉಪನ್ಯಾಸ, ಅರಣ್ಯ ಮತ್ತು ವನ್ಯಪ್ರಾಣಿಗಳ0 ಕಿರುಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ **ಮುಖ್ಯ ಅತಿಥಿಗಳಾಗಿ ಪಿ. ರವಿಕುಮಾರ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿ ಪರಿಸ್ಥಿತಿ ಇಲಾಖೆ ಹಾಗೂ ಡಾ. ಚಾರ್ಲ್ಸ್**

ಲೋಬೋ, ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್, ಕರ್ನಾಟಕ ವೃತ್ತ ಇವರು ಭಾಗವಹಿಸಲಿದ್ದಾರೆ.

ಎಸ್‌ಎಂ:ಜೆಡಿ:ಜಿಪಿಆರ್.

## ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪ್ರಕಟ

**ಬೆಂಗಳೂರು, ಮಾರ್ಚ್ 20 , (ಕರ್ನಾಟಕ ವಾರ್ತೆ)**

ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಪ್ರಥಮ ಬಾರಿಗೆ ಮೊದಲನೇ ರಾಷ್ಟ್ರೀಯ "ಕಲಾಸಂಕ್ರಾಂತಿ ಪುರಸ್ಕಾರ" ಕಲಾಪ್ರದರ್ಶನದಲ್ಲಿ 14 ಕಲಾವಿದರ ಕಲಾಕೃತಿಗಳನ್ನು ಬಹುಮಾನಕ್ಕಾಗಿ ಹಾಗೂ ಒಂದು ಕಲಾ ಸಾಹಿತ್ಯ ಬಹುಮಾನಕ್ಕಾಗಿ ಜ್ಯೂರಿ ಕಮಿಟಿಯು ಆಯ್ಕೆ ಮಾಡಿದೆ. ಪ್ರಶಸ್ತಿ ವಿಜೇತ 15 ಕಲಾವಿದರಿಗೆ ತಲಾ ರೂ. 1,00,000/- ನಗದು, ಪ್ರಶಸ್ತಿ ಪತ್ರ, ಸುವರ್ಣ ಶಿಲ್ಪ ನೀಡಿ ಗೌರವಿಸಲಾಗುವುದು.

ಪ್ರಶಸ್ತಿ ಪ್ರದಾನ ಸಮಾರಂಭವು ಮಾರ್ಚ್ 23ರಂದು ಸಂಜೆ 6 ಗಂಟೆಗೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದ್ದು ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ಉಮಾಶ್ರೀ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

**ಪ್ರಶಸ್ತಿ ವಿಜೇತರ ವಿವರ:**

| ಕ್ರ.ಸಂ. | ಬಹುಮಾನ ಪಡೆದವರ ಹೆಸರು ಮತ್ತು ಸ್ಥಳ | ಕಲಾಕೃತಿಯ ವಿವರ | ಮಾಧ್ಯಮ |
|---|---|---|---|
| 1. | ಭೋಲನಾಥ್ ರುದ್ರ, ಕೋಲ್ಕತ್ತ | ಟ್ರಾನ್ಸಿಟ್ | ವಾಟರ್ ಕಲರ್ ಆನ್ ಪೇಪರ್ |
| 2. | ಆಶಿಷ್ ಕುಶ್‌ವಾಹ, ನ್ಯೂ ದೆಹಲಿ | ರೆಮಿನಿಸ್ಕೀನ್ಸ್ | ವಾಟರ್ ಕಲರ್ ಆನ್ ಪೇಪರ್ |
| 3. | ವಿತೇಶ್ ನಾರಾಯಣ ನಾಯ್ಕ್, ಗೋವಾ | ಇಲ್ಯೂಸೀವ್ ವರ್ಡ್ | ಮಿಶ್ರಮಾಧ್ಯಮ |
| 4. | ಶಹಾನ್‌ಶಾ ಮಿಥ್ತಲ್, ನ್ಯೂ ದೆಹಲಿ | ಅನ್‌ಟೈಟಲ್ಡ್-1 | ಮಿಶ್ರಮಾಧ್ಯಮ |

| | | | |
|---|---|---|---|
| 5. | ಸುಜಯ್ ಮಲಾಕರ್, ಮುರ್‌ಶಿದಾಬಾದ್ | ಟೈಂ ಆಫ್ ಲವ್ | ಮಿಶ್ರಮಾಧ್ಯಮ |
| 6. | ವಿಪಿನ್ ಸಿಂಗ್ ರಜಪೂತ್, ಛತ್ತೀಸಗಡ್ | ಅನ್‌ಟೈಟಲ್ಡ್–2 | ಮಿಶ್ರಮಾಧ್ಯಮ |
| 7. | ವಿ.ಅಂಜಲಿ, ಕರ್ನಾಟಕ | ಟ್ರೈನ್ ಜರ್ನಿ–1 | ಪೋಸ್ಟಲ್ ಕಲರ್ ಆನ್ ಪೇಪರ್ |
| 8. | ಸಂಕೇತ್ ಕುಮಾರ್ ಜಯಂತಿ ಲಾಲ್ ವಿರಾಂಗಮಿ, ಗುಜರಾತ್ | ಅನ್‌ಟೈಟಲ್ | ಅಕ್ರಾಲಿಕ್ ಆನ್ ಕ್ಯಾನ್ವಸ್ |
| 9. | ಜೆ.ಡಿ.ರಾವ್ ತಮ್ಮಿನೇನಿ, ನ್ಯೂ ದೆಹಲಿ | ಸ್ಕ್ರೀಮ್ ಫಾರ್ ಮೀ | ವುಡ್ ಕಟ್ |
| 10. | ಸುಚೇತ ಮಾಧವ ರಾವ್ ಗಾಡ್ಗೇ, ಮಹಾರಾಷ್ಟ್ರ | ರಿವರ್ ವಿತ್ ಥೌವಸಂಡ್ | ವುಡ್ ಕಟ್ |
| 11. | ಜಗ್‌ಜೀತ್ ಕುಮಾರ್ ರೈ, ಉತ್ತರ ಪ್ರದೇಶ | ಟುಡೇ | ವುಡ್ ಕಟ್ |
| 12. | ವಿಜಯಾ, ಛತ್ತೀಸಗಡ್ | ಸ್ಮಾರ್ಟ್ ಅಕೋಸಿಯೇಷನ್ಸ್ | ಟೆರಕೋಟಾ, ಸ್ಟೀಲ್, ಜ್ಯೂಟ್ ಮತ್ತು ವುಡ್ |
| 13. | ಕಾಂಚನ್ ಕರ್ಜಿ, ವೆಸ್ಟ್ ಬೆಂಗಾಲ್ | ವ್ರಾಪಿಂಗ್ ಲೈವ್‌ಹಿವುಡ್ | ವುಡ್ ಮತ್ತು ವಾಟರ್ ಕಲರ್ |
| 14 | ಅಕಿಲ್ ಚಂದ್ರ ದಾಸ್, ವೆಸ್ಟ್ ಬೆಂಗಾಲ್ | ಮೈಗ್ರೇಷನ್ | ವುಡ್ ಮತ್ತು ಬ್ರಾಂಝ್ |

## ಕಲಾ ಸಾಹಿತ್ಯದ ಬಹುಮಾನಕ್ಕೆ ಆಯ್ಕೆಗೊಂಡ ಕಲಾವಿದರ ವಿವರ:

| ಕ್ರ.ಸಂ. | ಬಹುಮಾನ ಪಡೆದವರ ಹೆಸರು ಮತ್ತು ಸ್ಥಳ | ಕಲಾ ಸಾಹಿತ್ಯ |
|---|---|---|
| 1. | ಡಾ. ಶಿವಾನಂದ ಹೆಚ್.ಬಂಟನೂರ, ಬಳ್ಳಾರಿ | ಸಮಕಾಲೀನ ಕನ್ನಡ ದೃಶ್ಯಕಲಾ ಸಾಹಿತ್ಯ |

# ಮೆರಿಟ್ ಸರ್ಟಿಫಿಕೇಟ್ ಕಲಾಕೃತಿಗಳ ಬಹುಮಾನಕ್ಕಾಗಿ ಆಯ್ಕೆಗೊಂಡ ಕಲಾವಿದರ ವಿವರ

| ಕ್ರ.ಸಂ. | ಮೆರಿಟ್ ಸರ್ಟಿಪಿಕೇಟ್ ಪಡೆದವರ ಹೆಸರು ಮತ್ತು ಸ್ಥಳ | ಕಲಾಕೃತಿಯ ವಿವರ | ಮಾಧ್ಯಮ |
|---|---|---|---|
| 1. | ಸೋನಾಲ್ ವರ್ಷಮೇಯ, ಉತ್ತರ ಪ್ರದೇಶ | ಅಂಬುಬಚ್ಚಿ | ಎಚ್ಚಿಂಗ್ |
| 2. | ಪಮು ರಾಜೇಶ್ ಕುಮಾರ್, ತೆಲಂಗಾಣ | ಬೆಡ್ ಆಪ್ ಥ್ರಾನ್ಸ್ | ಎಚ್ಚಿಂಗ್ |
| 3. | ಧನಂಜಯ್ ಸಿಂಗ್ ಚೌಧುರಿ, ಕೈರಾಗರ್ | ದಿ ಥ್ರೀ ಪಿಲ್ಲರ್ಸ್ ಆಫ್ ಜಸ್ಟಿಸ್ | ಎಚ್ಚಿಂಗ್ |
| 4. | ಪಲಾಶ್ ಚಂದ್ರ ಬೈದ್ಯ, ವೆಸ್ಟ್ ಬೆಂಗಾಲ್ | ಅಧರ್ ವ್ಯೂವ್ | ಪೆನ್ ಮತ್ತು ಇಂಕ್ |
| 5. | ಶೇಖರ್ ಮಾರುತಿ ದಹಿವಾಲ್, ಪುಣೆ | ಜರ್ಮಿನೇಟ್ 03 | ಬಸಾಲ್ಟ್ ಸ್ಟೋನ್ |
| 6. | ರಮ್ಯ.ಇ.ಎಂ, ಬೆಂಗಳೂರು | ಫಾರೆಸ್ಟ್ ಚೈಲ್ಡ್ | ಸೆರಾಮಿಕ್ ಸ್ಟೋನ್‌ವೇರ್ |
| 7. | ಜಗನ್ ಮೋಹನ್ ಪೆನುಗಂಟಿ, ಆಂಧ್ರಪ್ರದೇಶ | ಅನ್‌ಟೈಟಲ್ | ಸ್ಯಾಂಡ್, ಸ್ಟೋನ್, ಮಾರ್ಬಲ್ ಮತ್ತು ವಾಟರ್ |
| 8. | ಪಾರ್ಥ ದಾಸ್‌ಗುಪ್ತ, ವೆಸ್ಟ್ ಬೆಂಗಾಲ್ | ಡ್ರಾ ವಿತ್‌ಡ್ರಾ | ಹ್ಯಾಂಡ್ ಮೇಡ್ ಪೇಪರ್ ಮತ್ತು ಡ್ರೈ ಲೆಟರ್ |
| 9. | ನಿತಿನ್ ಕುಮಾರ್ ಸಿಂಗ್, ಬೆಂಗಳೂರು | ಎ ಗ್ಲೀಮಿಂಗ್ ಸ್ಟ್ರೀಟ್ | ವಾಟರ್ ಕಲರ್ ಆನ್ ಪೇಪರ್ |
| 10. | ಅನುಪಮ್ ಬೇರ, ಕೋಲ್ಕತ್ತ | ಟೈಮ್ ಚೆಕ್ ನವ್ | ಎಗ್ ಟೆಂಪೇರ ಆನ್ ಪೇಪರ್ |
| 11. | ಪ್ರದ್ನ್ಯ ಹಿತೇಂದ್ರ ದುರಾಫೆ, ಮಧ್ಯ | ತಲ್‌ಮೇಲ್–5 | ಮಿಶ್ರ |

| | | | |
|---|---|---|---|
| | ಪ್ರದೇಶ | | |
| 12. | ಮಹೇಶ್ ಪಾಲ್ ಗೋಬ್ರ, ಮಧ್ಯ ಪ್ರದೇಶ | ಭೋಪಾಲ್ ಗ್ಯಾಸ್ ಟ್ರಾಜಡಿ 33 ಇಯರ್ಸ್ | ಅಕ್ರಾಲಿಕ್ ಆನ್ ಕ್ಯಾನ್ವಸ್ |
| 13. | ಕಿಶೋರ್ ಕುಮಾರ್, ನ್ಯೂ ದೆಹಲಿ | ಮೈ ವಿಲೇಜ್ ಗಾರ್ಡನ್–2 | ಅಕ್ರಾಲಿಕ್ ಆನ್ ಕ್ಯಾನ್ವಸ್ |
| 14. | ಶೇಕ್ ಹಿಫ್ಜುಲ್, ನ್ಯೂ ದೆಹಲಿ | ಕಾರ್ನರ್ ಪ್ಲೇಯರ್ಸ್ | ಅಕ್ರಾಲಿಕ್ ಆನ್ ಕ್ಯಾನ್ವಸ್ |
| 15. | ದೆಬೋಸ್ಮಿತ ಸಮಂತ, ತೆಲಂಗಾಣ | ದಿ ಗಾರ್ಡನ್ ಬಿಟ್ವೀನ್ ಪ್ಯಾರಡೈಸ್ ಮತ್ತು ಮೈ ಹೋಂ | ಗುವಾಚೆ ಆನ್ ಕ್ಯಾನ್ವಸ್ |

## <u>ಕಲಾಸಂಕ್ರಾಂತಿ ರಾಷ್ಟ್ರೀಯ ಪುರಸ್ಕಾರ–2015</u>

**ಬೆಂಗಳೂರು, ಮಾರ್ಚ್ 20 , (ಕರ್ನಾಟಕ ವಾರ್ತೆ)**

ಕರ್ನಾಟಕ ಲಲಿತಕಲಾ ಅಕಾಡೆಮಿಯ 50ನೇ ವರ್ಷದ ಸುವರ್ಣ ಸಂಭ್ರಮ ಸಂದರ್ಭದಲ್ಲಿ ನಾಡಿನ ದೃಶ್ಯಕಲಾ ಸಮುದಾಯದ ಕೆಲಸ ಮಾಡಲು ನಮಗೆ ದೊರಕಿದ 'ಸುವರ್ಣಾವಕಾಶ' ಎಂದು ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಡಾ.ಎಂ.ಎಸ್.ಮೂರ್ತಿ, ಇವರು ತಿಳಿಸಿದರು.

ಇಂದು ಕನ್ನಡ ಭವನದ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರ ಕೊಠಡಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ, ಜಾತ್ಯಾತೀತ ವೈಚಾರಿಕ, ಪ್ರಗತಿಪರ, ಸಾವಯವ ಚಿಂತನೆಯ ನೆಲೆಯಲ್ಲಿ ದೃಶ್ಯಕಲಾ ಸಮುದಾಯವನ್ನು ಬೆಳೆಸುವುದು ನಮ್ಮ ಮುಖ್ಯ ಆಶಯವಾಗಿದೆ. ದೃಶ್ಯಕಲೆಯ ಈ ಸಮಗ್ರ ಏಳಿಗೆಗೆ ಬಹುಮುಖ್ಯವಾಗಿ ನಮ್ಮ ಪರಂಪರೆಯ ನಾನಾ ಪದರಗಳನ್ನು ನಾವು ಗಮನಿಸಬೇಕಾಗಿದೆ. ಇನ್ನು ಉಸಿರಾಡುತ್ತಿರುವ ದೇಸಿ ಕಲಾ ಚಿಂತನೆಯ ಮೂಲ ಸಂವೇದನೆ, ಜೀವಂತಿಕೆ, ಸೊಗಸು, ಸ್ವಾವಲಂಬನೆ, ಸ್ವಾಭಿಮಾನ ಮತ್ತು ಅದರ ಅನನ್ಯತೆ ಇಂದಿನ ಆಧುನಿಕ ಕಲಾ ಚಿಂತನೆಗೆ, ಪ್ರಯೋಗಗಳಿಗೆ ಸ್ಫೂರ್ತಿಯಾಗಬೇಕು ಎಂದರು.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ನಮ್ಮ ಈ ಅವಧಿಯ ಅಕಾಡೆಮಿಯ ಸಮಿತಿಯು ಅನೇಕ ಪ್ರಥಮಗಳಿಗೆ ನಾಂದಿ ಹಾಡಿದೆ. ದೇಶದ ನಾಲ್ಕೂ

ದಿಕ್ಕುಗಳಿಗೆ ನಮ್ಮ ಅಕಾಡೆಮಿಯ ಪ್ರಥಮ ರಾಷ್ಟ್ರೀಯ ಕಲಾ ಪ್ರದರ್ಶನ ಮತ್ತು ಸಂಕ್ರಾಂತಿ ರಾಷ್ಟ್ರೀಯ ಕಲಾ ಪುರಸ್ಕಾರದ ಯೋಜನೆ ಮೂಲಕ ಸಾಂಸ್ಕೃತಿಕ ಪರಿಮಳ ಸಾವಕಾಶವಾಗಿ ಹರಡುತ್ತಿದೆ ಎಂದು ತಿಳಿಸಿದರು.

ಮೂರು ವರ್ಷಗಳ ಈ ಅವಧಿಯಲ್ಲಿ ನೂರಾರು ಕಲಾ ಶಿಬಿರ (Art Camps), ಕಲಾಚಿಂತನೆ, ಶಿಕ್ಷಣ, ವಿಮರ್ಶೆ, ಸಂಶೋಧನೆ ಕುರಿತು ಕಮ್ಮಟಗಳ, ವಿಚಾರ ಸಂಕಿರಣಗಳು, ವಿಶೇಷವಾಗಿ ಜನಪದ ಸಂಸ್ಕೃತಿಯ ದೃಶ್ಯಪ್ರಕಾರಗಳ ಅನನ್ಯತೆಯನ್ನು ಇಂದಿನ ಯುವಕಲಾವಿದರ ಅನುಭವಕ್ಕೆ ತರುವ ಪ್ರಯತ್ನ ಯಶಸ್ವಿಯಾಗಿದೆ. ಮಡುಗಟ್ಟಿದ ನಮ್ಮ ನಾಡಿನ ಆಧುನಿಕ ಕಲಾಚಿಂತನೆಯನ್ನು ನಮ್ಮ ದೇಸಿ ನೆಲದ ಆಳಕ್ಕೆ ಇಳಿದು ಆ ಮೂಲಕ ಸಮಕಾಲೀನ ದೃಶ್ಯಕಲೆಯ ಕಾಯಕಲ್ಪ ಸಾಧ್ಯವಾಗಿಸುವ ಪ್ರಯತ್ನ ನಮ್ಮದು. ಈ ನಾಡಿನ 'ದೃಶ್ಯಕಲಾ ಚಿಂತನೆ', ಸ್ಪಷ್ಟ ನಿಲುವು ಅದರ ರಾಚನಿಕ ನೆಲೆಗಳ ಸ್ವರೂಪಗಳ ಮೂಲಕ ಕಲಾಸ್ವಾಧನೆಗೆ ತುಡಿಯುವವರಿಗೆ ತಲುಪುವುದು. ದೃಶ್ಯಕಲೆಯ ಸಂವಹನದ ಬೆಳವಣಿಗೆಯ ದೃಷ್ಟಿ ಬಹಳ ಮುಖ್ಯವಾದುದು ಎಂದರು.

'ದೃಶ್ಯಕಲೆ'ಯ ಅಧ್ಯಯನ ಶಿಸ್ತು, ಸಾಧ್ಯತೆಗಳು, ಅನ್ವೇಷಣೆ, ಪ್ರಯೋಗ, ಸವಾಲುಗಳು ಮತ್ತು ಕಲೆ ಅನನ್ಯತೆ ಇತ್ಯಾದಿ ಅಂಶಗಳು ಸಂಕೀರ್ಣವಾದ, ಕಲೆಯ, ಸೂಕ್ಷ್ಮವಾದ ಕವಲುಗಳಾದರೂ ಕಲಾ ಚರಿತ್ರೆಯ, ಕಲಾ ಶಿಕ್ಷಣ ಮತ್ತು ಕಲಾ ಸಂಶೋಧನೆ ದೃಷ್ಟಿಯಿಂದ ಕಲಾವಿದ–ಕಲೆ–ಕಲಾಕೃತಿಗಳು ಇನ್ನಷ್ಟು ಸ್ಪಷ್ಟವಾಗಿ ಬಾಹ್ಯಕ್ಕೆ ಕಾಣಿಸಿಕೊಳ್ಳಬೇಕಾದ ಅಗತ್ಯವಿದೆ. ಕಲಾವಿದ ಏಕಾಂತದ ಜೀವಿ ಎನಿಸಿಕೊಂಡರೂ ಆತ ಲೋಕಾಂತದೊಂದಿಗೆ ಬಾಳದಿದ್ದಲ್ಲಿ ಅವನ ನೆಲ, ಪರಿಸರ, ಸಂಸ್ಕೃತಿಯಿಂದ ಏನನ್ನು ಪಡೆಯಲಾರದ, ಅನುಭವಕ್ಕೆ ದಕ್ಕಿಸಿಕೊಳ್ಳಲಾಗದ ಮಿತಿ ಅವನ ಬದುಕು ಕೃತಿಗಳ ದೌರ್ಬಲ್ಯವಾಗಿ ಕಾಡದಂತೆ; ಕಲಾವಿದ ಕೇವಲ ದಂತಗೋಪುರದಲ್ಲಿ ಜೀವಿಸುವ, ಸಮಾಜದಿಂದ ದೂರವಿರುವ ಅನ್ಯ ಜೀವಿಯಲ್ಲ ಎಂಬ ಸತ್ಯವನ್ನು ಕಲಾ ಸಮೂದಾಯಕ್ಕೂ ಮತ್ತು ಸಮಾಜಕ್ಕೂ ಸ್ಪಷ್ಟಪಡಿಸಬೇಕಿದೆ. ಕಲಾವಿದನ ಕಲೆಯ ಅರಿವು ಮತ್ತು ಕಲಾಕೃತಿಯ ಅನುಭವಗಳು ವಿಭಿನ್ನವಾದುವೆ ಅಥವಾ ಅವೆರಡು ಒಂದೆ? ಕಲೆ–ಕಲಾಕೃತಿ ಎರಡರ ವ್ಯತ್ಯಾಸಗಳೇನು? ಇತ್ಯಾದಿ ಪ್ರಶ್ನೆಗಳು ನಮ್ಮ ಮುಂದಿದೆ. ಕಲಾವಿದನ ಮೌಲ್ಯ ನಂಬಿಕೆ, ಬದ್ಧತೆಗಳು ಕೇವಲ ಕೃತಿ ಸೃಷ್ಟಿಸಿ ತನ್ನ ಕೌಶಲ್ಯ, ಚಮತ್ಕಾರ, ವಿಸ್ಮಯಗಳನ್ನು ಜಗತ್ತಿಗೆ ಕಾಣಿಸುವ ಹಪಾಹಪಿಗೆ ಕಾರಣವೇನು? ಅವನ ಈ ತಹತಹದ ಹಿಂದೆ ಇರುವ ತುಡಿಯುವ ಮನಸ್ಸು ಯಾವುದು? ಕಲಾವಿದ, ಸಮಾಜದಲ್ಲಿ ಅವನ ಕೃತಿಗಳ ಮೂಲಕ ಗುರುತಿಸಲ್ಪಡುತ್ತಾನೆ. ಅಂತಹ ಕೃತಿಗಳ ಮೂಲಕ ಆತ ಹುಡುಕುತ್ತಿರುವುದಾದರೂ ಏನನ್ನು? ಜನಪ್ರಿಯತೆ, ಕೀರ್ತಿ, ಗೌರವ, ಆತ್ಮ ಸಂತೋಷ?

ಭಾರತೀಯ ಆಧುನಿಕ ಕಲಾ ಸಂದರ್ಭದಲ್ಲಿ ದೃಶ್ಯಕಲೆಯ ತಾತ್ವಿಕ ನೆಲೆಗಳ ಈ ಎಲ್ಲಾ ಅಂಶಗಳ ಬಗ್ಗೆ ಬಹುಮುಖ್ಯವಾಗಿ ಚರ್ಚಿಸಬೇಕಾದ ಜರೂರತ್ತು ಈಗ ಬಂದಿದೆ. ಇಂತಹ ಚರ್ಚೆಗೆ ಕಲಾವಿದರು ಒಂದೆಡೆ ಕಲೆತು ಪರಸ್ಪರ ಮುಕ್ತ ಚರ್ಚೆಗೆ ಸಿದ್ಧವಾಗಬೇಕು. ಪ್ರದರ್ಶನಗಳಿಗೆ ಭೇಟಿ ನೀಡಬೇಕು. ವಿಚಾರ ಸಂಕಿರಣಗಳು, ಕಮ್ಮಟಗಳು ಮುಕ್ತ ಚರ್ಚೆ ಸಾಧ್ಯವಾಗುವುದು ಎಂದು ತಿಳಿಸಿದರು.

ನಮ್ಮ ಕರ್ನಾಟಕ ಲಲಿತಕಲಾ ಅಕಾಡೆಮಿಯು ತನ್ನ ಸುವರ್ಣಸಂಭ್ರಮದ ಆಚರಣೆ ಸಂದರ್ಭದಲ್ಲಿ ಪ್ರಪ್ರಥಮವಾಗಿ ರಾಷ್ಟ್ರೀಯ ಕಲಾ ಪ್ರದರ್ಶನ ಆಯೋಜಿಸಿದೆ. ಆ ಮೂಲಕ ದೇಶದ ನಾಲ್ಕೂ ದಿಕ್ಕುಗಳ 'ದೃಶ್ಯಕಲಾ ಸಂಸ್ಕೃತಿ'ಯನ್ನು ಒಂದೆಡೆ ಸೇರಿಸುವ ಪ್ರಯತ್ನ ಮಾಡಿದೆ. ಅಲ್ಪಕಾಲದ ನಮ್ಮ ಪ್ರಕಟಣೆಗೆ ಸ್ಪಂದಿಸಿದ ದೇಶದ ಎಲ್ಲಾ 700ಕ್ಕೂ ಹೆಚ್ಚು ಕಲಾವಿದರಿಗೆ ಅಕಾಡೆಮಿಯು ಕೃತಜ್ಞತೆ ಸಲ್ಲಿಸುತ್ತದೆ. ದೇಶದ ಈ ಎಲ್ಲಾ ಕಲಾವಿದರ ವಿಶ್ವಾಸ, ನಂಬಿಕೆಗೆ ದಕ್ಕೆಯಾಗದಂತೆ ಅತ್ಯಂತ ಪಾರದರ್ಶಕವಾಗಿ 117 ಕಲಾ ಕೃತಿಗಳನ್ನು ನಮ್ಮ ಮೊದಲ ಸುತ್ತಿನ ಆಯ್ಕೆ ಸಮಿತಿಯು ಪ್ರದರ್ಶನಕ್ಕೆ ಆಯ್ಕೆ ಮಾಡಿದೆ. ಎರಡನೇ ಸುತ್ತಿನ ಆಯ್ಕೆಯ ಸಮಿತಿಯು ಈ 117 ಕೃತಿಗಳಲ್ಲಿ 14 ಕಲಾಕೃತಿಗಳನ್ನು , ಜೊತೆಗೆ ಕನ್ನಡ ಕಲಾ ಸಾಹಿತ್ಯಕ್ಕೆ 'ಕಲಾಸಂಕ್ರಾಂತಿ ರಾಷ್ಟ್ರೀಯ ಪುರಸ್ಕಾರಕ್ಕಾಗಿ ಆಯ್ಕೆ ಮಾಡಿದೆ. ಆಯ್ಕೆಯಾದ ಪ್ರತಿ ಕಲಾವಿದರಿಗೆ ಒಂದು ಲಕ್ಷ ನಗದಿನೊಂದಿಗೆ ಆಯ್ಕೆ ಮಾಡಿ ಅಕಾಡೆಮಿಯು ಗೌರವಿಸುತ್ತಿದೆ. ಇದರೊಂದಿಗೆ ಆಯ್ಕೆಯಾದ 16 ಕಲಾಕೃತಿಗಳಿಗೆ 'ಮೆರಿಟ್ ಸರ್ಟಿಫಿಕೇಟ್' ನೀಡಿ ಅಕಾಡೆಮಿಯು ಗೌರವಿಸುತ್ತಿದೆ. ಪ್ರಪ್ರಥಮವಾಗಿ ರಾಜಧಾನಿಯಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ. ಮುಂದಿನ 'ಕಲಾಸಂಕ್ರಾಂತಿ ರಾಷ್ಟ್ರೀಯ ಪುರಸ್ಕಾರ ಪ್ರದಾನ' ಕಾರ್ಯಕ್ರಮಗಳು ನಮ್ಮ ರಾಜ್ಯದ ಹೆಮ್ಮೆಯ ಪ್ರಾಚೀನ ಕಲಾಕೇಂದ್ರಗಳಾದ ಬಾದಾಮಿ, ಐಹೊಳೆ, ಹಂಪಿ, ಮೈಸೂರು, ಶ್ರವಣಬೆಳಗೊಳ, ಬೇಲೂರು, ಹಳೇಬೀಡುಗಳಲ್ಲಿ ನಡೆಸಬೇಕೆಂಬ ಆಶಯ ನಮ್ಮದು. ಆ ಮೂಲಕ ದೇಶದ ಎಲ್ಲಾ ಭಾಗಗಳಿಂದ ಇಲ್ಲಿಗೆ ಬರುವ ಕಲಾವಿದರಿಗೆ ಅತಿಥ್ಯ ನೀಡಿ ನಮ್ಮ ನಾಡು, ಸಂಸ್ಕೃತಿಯನ್ನು ಪರಿಚಯಿಸುವುದು ಅದರ ವೈಭವದ ಹಿನ್ನೆಲೆಯಲ್ಲಿ ಅವರನ್ನು ಗೌರವಿಸುವುದು ಒಂದು ಸತ್ಸಂಪ್ರದಾಯವಾಗಲಿದೆ. ಜೊತೆಗೆ ದೇಶದ ಇತರ ಭಾಗಗಳ ಕಲಾವಿದರ ಮತ್ತು ನಮ್ಮ ಸಾಂಸ್ಕೃತಿಕ ಸಂಬಂಧ ವೃದ್ಧಿಯಾಗಲಿದೆ ಎಂದರು.